<u>ದಿಃ **13.06.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲುಃ ಶ್ರೀ.ಕೆ.ಹೆಚ್.ಇ ವಕೀಲರಿಂದಃ 2 ರಿಂದ 6ನೇ ಪ್ರತಿವಾದಿಯರ ಪರವಾಗಿಃ</u>**

**20)** ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುವದಿಲ್ಲ. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬಾರದೇ ಇದ್ದುದರಿಂದ ಈ ಪ್ರಕರಣದ ವಾದ ಪತ್ರದಲ್ಲಿ ಏನು ಬರೆದಿದ್ದಾರೆ ಎಂದು ಮಾಹಿತಿ ಇಲ್ಲ ಅಂದರೆ ಸರಿಯಲ್ಲ. ಅದೇ ರೀತಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನೆಲ್ಲ ಸಂಗತಿಗಳನ್ನು ಬರೆಯಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ. ಈ ಪ್ರಕರಣದ ದಾವಾ ಆಸ್ತಿಗಳು ನಮ್ಮ ಒಟ್ಟು ಕುಟುಂಬದ ಆಸ್ತಿಗಳಾಗಿರುತ್ತವೆ. ಆದರೆ ಅವುಗಳ ಸರ್ವೆ ನಂಬರ ಮತ್ತು ಪ್ಲಾಟಿನ ಸಂಖ್ಯೆ ಹೇಳಲು ಬರುವದಿಲ್ಲ. ಅದೇ ರೀತಿ ದಾವಾ ಆಸ್ತಿಗಳ ಚೆಕ್ಕಬಂದಿಗಳನ್ನು ನಮ್ಮ ವಕೀಲರಿಗೆ ಹೇಳಿರುತ್ತೇನೆ. ಈ ದಾವೆಯನ್ನು ಸಲ್ಲಿಸುವಾಗ ನಮ್ಮ ವಕೀಲರಿಗೆ ದಾವಾ ಆಸ್ತಿಗಳ ಚೆಕ್ಕಬಂದಿಗಳನ್ನು ಹೇಳಿಲ್ಲ ಅಂದರೆ ಸರಿಯಲ್ಲ. ಆ ಕುರಿತಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅದೇ ರೀತಿ ದಾವಾ ಆಸ್ತಿಗಳ ಒಟ್ಟು ಮೌಲ್ಯ ಎಷ್ಟು ಆಗುತ್ತದೆ ಎಂದು ಸರಿಯಾಗಿ ಬರೆಸಿಲ್ಲ ಅಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ದಾವಾ ಆಸ್ತಿಗಳ ಒಟ್ಟು ಮೌಲ್ಯ ಎಷ್ಟು ಇರುತ್ತದೆ ಎಂದು ನಾನು ನನ್ನ ವಕೀಲರಿಗೆ ಹೇಳಿ ಬರೆಯಿಸಿದೇ ಇದ್ದರೂ, ಬರೆಯಿಸಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**21)** ದಾವಾ ಆಸ್ತಿಗಳು ಮೈಲಾರ ಗ್ರಾಮದಲ್ಲಿ ಕೃಷಿ ಜಮೀನುಗಳು ಇರುತ್ತವೆ ಮತ್ತು ಮೈಲಾರ ಗ್ರಾಮ ಪಂಚಾಯತಿ ಹದ್ದಿನಲ್ಲಿ ಬರುವ ಮನೆ ಮತ್ತು ಪ್ಲಾಟುಗಳು ಇರುತ್ತವೆ. ಅಲ್ಲದೇ ಹಾವೇರಿ ತಾಲೂಕು ಹಾವನೂರ ಗ್ರಾಮದಲ್ಲಿ ಒಂದು ಕೃಷಿ ಜಮೀನು ಇರುತ್ತದೆ. ದಾವಾ ಆಸ್ತಿಗಳ ಸರ್ವೆ ನಂಬರಗಳನ್ನು ಹೇಳಲು ಆಗುವದಿಲ್ಲ. ಅದೇ ರೀತಿ ಮೈಲಾರ ಗ್ರಾಮದಲ್ಲಿರುವ

ಆಸ್ತಿಗಳ ಸರ್ವೆ ನಂಬರಗಳನ್ನು ಸಹ ಹೇಳಲು ಬರುವದಿಲ್ಲ. ಹಾವನೂರ ಗ್ರಾಮದಲ್ಲಿರುವ ಕೃಷಿ ಜಮೀನು ಮತ್ತು ಮೈಲಾರ ಗ್ರಾಮದಲ್ಲಿರುವ ಕೃಷಿ ಜಮೀನುಗಳು ಮತ್ತು ಮನೆಗಳು ಮತ್ತು ಪ್ಲಾಟುಗಳು ನಮ್ಮ ಮಾವನಿಂದ ನಮಗೆ ಬಂದಿರುತ್ತವೆ. ಮೈಲಾರ ಗ್ರಾಮದಲ್ಲಿರುವ ಕೃಷಿ ಜಮೀನು ಮತ್ತು ಹಾವನೂರ ಗ್ರಾಮದಲ್ಲಿರುವ ಕೃಷಿ ಜಮೀನುಗಳು ಮತ್ತು ಮೈಲಾರ ಗ್ರಾಮದಲ್ಲಿರುವ ಮನೆಗಳು ಮತ್ತು ಪ್ಲಾಟುಗಳು ಹೇಗೆ ಬಂದಿರುತ್ತವೆ ಎಂದು ತೋರಿಸಲು ದಾಖಲಾತಿಗಳನ್ನು ಸಲ್ಲಿಸಿರುತ್ತೇನೆ. ನಾನು ದಾವಾ ಆಸ್ತಿಗಳ ಕುರಿತಾಗಿ ಯಾವ ಯಾವ ದಾಖಲೆಗಳನ್ನು ಸಲ್ಲಿಸಿರುತ್ತೇನೆ ಎಂದು ಗೊತ್ತಿಲ್ಲ.

**22)** ಪಾರ್ವತೆವ್ವ 2021 ನೇ ಇಸ್ವಿಯಲ್ಲಿ ಮೃತಪಟ್ಟಿರುತ್ತಾಳೆ. ಅದೇ ರೀತಿ ಫಕ್ಕೀರಪ್ಪ ಮೃತಪಟ್ಟು 35 ವರ್ಷಗಳಾಗಿರುತ್ತವೆ, ಆದರೆ ದಿನಾಂಕ ಮತ್ತು ಇಸ್ವಿ ಗೊತ್ತಿಲ್ಲ. ಈಗ ಪ್ರಸ್ತುತವಾಗಿ ನಾನು ತಾವರಗೊಂದಿ ಗ್ರಾಮದಲ್ಲಿ ವಾಸವಾಗಿರುತ್ತೇನೆ. ಈರಪ್ಪ ನನಗೆ ಗಂಡನಾಗಬೇಕು. ನನ್ನ ಗಂಡ ಈರಪ್ಪ ದಿನಾಂಕಃ 01.09.1999 ನೇ ಇಸ್ವಿಯಲ್ಲಿ ಮೃತಪಟ್ಟಿರುತ್ತಾರೆ. ನನ್ನ ಗಂಡ ಈರಪ್ಪ ಹೃದಯಾಘಾತವಾಗಿ ಮೃತಪಟ್ಟಿರುತ್ತಾನೆ. ನನ್ನ ಗಂಡ ಹೃದಯಾಘಾತದಿಂದ ಮೃತಪಟ್ಟಿರುತ್ತಾನೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿರುವದಿಲ್ಲ. ಈರಪ್ಪ ನನ್ನ ಗಂಡ ಮೃತಪಡದೇ ಇದ್ದರೂ ಸಹ ನಾನು ಮತ್ತು ನನ್ನ ಮಗಳು ಇಬ್ಬರೂ ಸೇರಿ ನನ್ನ ಗಂಡನ ಖೊಟ್ಟಿ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನನ್ನ ಅತ್ತೆ ಪಾರ್ವತೆವ್ವ ಇವಳನ್ನು ಪಕ್ಷಗಾರಳನ್ನಾಗಿ ಸೇರಿಸಿರುವದಿಲ್ಲ. ನನ್ನ ಗಂಡ ಮೃತಪಡದೇ ಇದ್ದರೂ ಸಹ ಆತನ ಮರಣ ಪ್ರಮಾಣ ಪತ್ರವನ್ನು ಖೊಟ್ಟಿಯಾಗಿ ತಯಾರಿಸಿ ಈ ಪ್ರಕಣದಲ್ಲಿ ಹಾಜರುಪಡಿಸಿರುತ್ತೇನೆ ಅಂದರೆ ಸರಿಯಲ್ಲ.

**23)** ನನಗೆ ಫಕ್ಕೀರಪ್ಪನ ಕುಟುಂಬದ ಬಗ್ಗೆ ಮತ್ತು ಆತನ ಆಸ್ತಿಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲ ಅಂದರೆ ಸರಿಯಲ್ಲ. ನಾನು ನನ್ನ ಗಂಡ ಈರಪ್ಪ ಮನೆಬಿಟ್ಟು ಹೋದ ನಂತರ ನಾನು ನನ್ನ ತವರುಮನೆಗೆ ಹೋಗಿ ಅಲ್ಲಿ ವಾಸವಾಗಿರುತ್ತೇನೆ. ನಾನು ಪ್ರತಿವಾದಿಗಳ ಒಟ್ಟುಕುಟುಂಬದಲ್ಲಿ ವಾಸವಾಗಿಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ನಾನು ಪ್ರತಿವಾದಿಗಳ ಜೊತಗೆ ಒಟ್ಟುಕುಟುಂಬದಲ್ಲಿ ವಾಸವಿದ್ದು ಯಾವತ್ತೂ ಕೂಡ ಸಾಗುವಳಿ ಮಾಡಿಲ್ಲ ಮತ್ತು ಪ್ರತಿವಾದಿಗಳ ಜೊತೆಗೆ ವಾಸವಾಗಿಲ್ಲ ಅಂದರೆ ಸರಿಯಲ್ಲ. ದಾವೆಯನ್ನು ಸಲ್ಲಿಸಿದ ನಂತರ ನನ್ನ ಅತ್ತೆಯಾದ ಪಾರ್ವತೆವ್ವ ಮತ್ತು ಉಳಿದ ಪ್ರತಿವಾದಿಯರು ಯಾವ ಸಂಗತಿಗಳನ್ನು ಬರೆಯಿಸಿ ಪ್ರತಿವಾದ ಪತ್ರ ಬರೆದಿರುತ್ತಾರೆ ಎಂದು ನನಗೆ ತಿಳಿದಿರುತ್ತದೆ. ದಾವಾ ಆಸ್ತಿಗಳು ಈ ಪ್ರಕರಣವನ್ನು ದಾಖಲಿಸಲ್ಪಡುವಾಗಿ ಸದರಿ ಆಸ್ತಿಗಳು ಪಿರ್ತಾರ್ಜಿತ ಆಸ್ತಿಗಳು ಆಗಿರುವದಿಲ್ಲ ಮತ್ತು ನನಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇರುವದಿಲ್ಲ ಎಂದು ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರ ಹೇಳಿರುತ್ತಾರೆ ಅದು ಸುಳ್ಳಾಗಿರುತ್ತದೆ .

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ, ಹಾವೇರಿ.